# ನೀನೇ ದಯಾಳು ನಿರ್ಮಲಚಿತ್ತ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page no. 92.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 346.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page no. 431.
4. **Note:** The wordings are as per Ref. 1. The wordings Ref. 2 are similar to Ref. 1 except few differences, which are marked in yellow highlights. The lyrics in Ref. 3 are similar to Ref. 2. Singer has followed lyrics as in Ref. 2.

ರಾಗ: ಆನಂದ ಭೈರವಿ ತಾಳ: ಅಟ

ನೀನೇ ದಯಾಳು ನಿರ್ಮಲ ಚಿತ್ತ ಗೋವಿಂದ
ನಿಗಮ ಗೋಚರ ಮುಕುಂದ ॥ ಪ ॥

ಜ್ಞಾನಿಗಳರಸು ನೀನಲ್ಲದೆ ಜಗಕಿನ್ನು
ಮಾನದಿಂದಲಿ ಕಾವ (ಕಾಯ್ವ) ದೊರೆಗಳ ನಾ ಕಾಣೆ ॥ ಅಪ ॥

ಬಗೆಬಗೆಯಲಿ ನಿನ್ನ ಸ್ತುತಿಪೆನೊ (ತುತಿಪೆನೊ)
ನಗಧರ ಖಗಪತಿ ವಾಹನನೆ
ಮಗುವಿನ ಮಾತೆಂದು ನಗುತ ಕೇಳುತ (ಕೇಳಿ) ನೀನು
ಬೇಗದಿಂದಲಿ ಕಾಯೋ ಸಾಗರ ಶಯನನೆ ॥ 1 ॥

ದಾನವಾಂತಕ ದೀನ ಜನ ಮಂದಾರನೆ
ಧ್ಯಾನಿಪರ ಮನದೊಳು ಸಂಚರನೆ (ಧ್ಯಾನಿಪರ ಮನ ಸಂಚಾರನೆ)
ಮೌನನಾದೆನು ನಿನ್ನ ಧ್ಯಾನಾನಂದದಿ ಈಗ
ಸಾನುರಾಗದಿ ಕಾಯೊ ಸನಕಾದಿ ವಂದ್ಯನೆ ॥ 2 ॥

ಮಂದರೋದ್ಧರ (ಮಂದರಧರ) ಅರವಿಂದ ಲೋಚನ ನಿನ್ನ
ಕಂದನೆಂದೆನಿಸೊ ಎನ್ನ
ಸಂದೇಹವೇತಕೆ (ಸಂದೇಹವೇಕಿನ್ನು) ಸ್ವಾಮಿ ಮುಕುಂದನೆ
ಬಂದೆನ್ನ ಕಾಯೊ ಶ್ರೀ ಪುರಂದರ ವಿಠಲನೆ     ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ನಿಗಮಗೋಚರ** – ವೇದಗಳಿಂದಲೇ ತಿಳಿಯಲ್ಪಡತಕ್ಕವನು.

**ಮಾನದಿಂದಲಿ** – ಅಭಿಮಾನದಿಂದ (ನಿನ್ನವನೆಂಬ ಪ್ರೀತಿಯಿಂದ).

**ಖಗಪತಿ** = ಗರುಡ, ಪಕ್ಷಿಗಳ ರಾಜ

**ಖಗಪತಿವಾಹನನೆ** – ಗರುಡವಾಹನನೆ, ವಿಷ್ಣು

**ದಾನವಾಂತಕ** = ಅಸುರರ ವೈರಿ, ರಾಕ್ಷಸರ ವೈರಿ, ವಿಷ್ಣು, ಕೃಷ್ಣ

**ಸಂಚರ** = ಮಾರ್ಗ, ದ್ವಾರ, ಪ್ರವೇಶ, ಅಭಿವೃದ್ಧಿ, ದೇಹ

**ನಗ** = ಬೆಟ್ಟ, ಪರ್ವತ, ಆಭರಣ, ಒಡವೆ

**ನಗಧರ** = ಬೆಟ್ಟವನ್ನು ಎತ್ತಿದವನು, ಕೃಷ್ಣ

**ಅರವಿಂದ** = ಕಮಲ, ತಾವರೆ

**ಲೋಚನ** = ಕಣ್ಣು, ನೋಟ, ದೃಷ್ಟಿ, ಕಾಂತಿ

**ವಂದ್ಯ** = ಪೂಜನೀಯ, ನಮಸ್ಕರಿಸಲು ತಕ್ಕ

**ಜ್ಞಾನಿಗಳರಸು** = ಜ್ಞಾನಿಗಳಿಗೆಲ್ಲ ಒಡೆಯ, ಶ್ರೀ ಹರಿ

**ಮಗುವಿನ ಮಾತೆಂದು** = ನಿಷ್ಪಾಪ ಬುದ್ಧಿಯವನ ಮಾತು ಎಂದು

**ದೀನ ಜನ ಮಂದಾರನೆ** = ನಿನ್ನ ಕರುಣೆಯನ್ನು ಪ್ರಾರ್ಥಿಸುವ ಭಕ್ತರಿಗೆ ಅಭೀಷ್ಟದಾಯಕನೆ

**ಮಂದರೋದ್ಧಾರ** = ಮಂದರ ಪರ್ವತವನ್ನು ಬೆನ್ನ ಮೇಲೆ ಹೊತ್ತವ, ಕೂರ್ಮ ಅವತಾರದ ವಿಷ್ಣು

**Classification:** Keerthane
**Ankita:** sri purandara vittala
**Location:** NA

**Category:** Vishnu Stuti, Bhakti, Pooja Tatva

**Sub-Category:** Nirmala, chitta, govinda, Vishnu, mukunda, jnana, loka, dhyana, Samudra, anumana, raja, arasa, nage, koosu, jana, mana,

**Pravachana:** NA

**Explanation:** NA